# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: 243 |
| ಸದಸ್ಯರ ಹೆಸರು | :: ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | :: 11-07-2018 |
| ಉತ್ತರಿಸುವ ಸಚಿವರು | :: ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಜಮೀನು ಅಂದರೇನು; ಇದರಲ್ಲಿ ಎಷ್ಟು ವಿಧ; ಅವು ಯಾವುವು; (ವಿವರವಾದ ಮಾಹಿತಿಯೊಂದಿಗೆ ವಿವರ ನೀಡುವುದು). | ಕಂದಾಯ ಜಮೀನು ಎಂದರೆ ಭೂ ಮಾಪನ ಇಲಾಖೆಯಿಂದ ಅಳತೆ ಮಾಡಲ್ಪಟ್ಟ ಹಾಗೂ ಕಂದಾಯವನ್ನು ನಿಗಧಿಪಡಿಸಿರುವ ಹಿಡುವಳಿ ಜಮೀನಾಗಿರುತ್ತದೆ. ಇದರಲ್ಲಿ 4 ಶ್ರೇಣಿಗಳಾಗಿ ಗುರುತಿಸಲಾಗಿದ್ದು, ಅವುಗಳು ಖುಷ್ಕಿ, ತರಿ, ಬಾಗಾಯ್ತು ಮತ್ತು ಪ್ಲಾಂಟೇಷನ್. |
| ಆ) | ಪಾಳು ಭೂಮಿ, ಕಲ್ಲುಬಂಜರು ಮತ್ತು ಕೃಷಿ ಬೇಸಾಯ ಮಾಡಲು ಯೋಗ್ಯವಲ್ಲದ್ದು ಅಂದರೆ ಯಾವ ಜಮೀನು; (ವಿವರವಾದ ಮಾಹಿತಿಯೊಂದಿಗೆ ವಿವರ ನೀಡುವುದು). | ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು 'ಪೂಟ್ ಖರಾಬು' ಎಂದು ವರ್ಗೀಕರಿಸಲ್ಪಟ್ಟಿದ್ದು, ಈ ಕೆಳಕಂಡಂತೆ ವಿಂಗಡಿಸಲ್ಪಟ್ಟಿರುತ್ತವೆ.<br>1. ಹಿಡುವಳಿದಾರನ ಹೊಲದ ಮನೆಗಳು ಅಥವಾ ಕಣಗಳು ಸೇರಿ ಮೋಜಣಿ ಕಾಲದಲ್ಲಿ ವ್ಯವಸಾಯಕ್ಕೆ ಅನುಪಯುಕ್ತವೆಂದು ವರ್ಗೀಕರಿಸಲ್ಪಟ್ಟ ಇಂತಹ ಜಮೀನುಗಳನ್ನು 'ಪೋಟ್ ಖರಾಬು ಎ' ಎಂದು ವಿಂಗಡಿಸಲಾಗಿದೆ.<br>2. ಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸಿದ ಜಮೀನುಗಳನ್ನು 'ಪೋಟ್ ಖರಾಬು ಬಿ' ಎಂದು ವಿಂಗಡಿಸಿದ್ದು, ಇಂತಹ ಜಮೀನುಗಳ ಸಂಪೂರ್ಣ ಒಡೆತನವು ಸರ್ಕಾರದ್ದಾಗಿರುತ್ತದೆ. |
| ಇ) | ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಸುರುಗೇನಹಳ್ಳಿ ಬೆಟ್ಟದಿಂದ ಮುಂದಕ್ಕೆ ಕೊಡಗೇಹಳ್ಳಿ ಗ್ರಾಮದ ಅಡ್ಡ ರಸ್ತೆಯ ವರೆಗೆ ಇರುವ ಕಲ್ಲು ಬಂಜರು ಜಮೀನು ಎಷ್ಟಿದೆ, ಇದು ಯಾವ ಯಾವ ಗ್ರಾಮಗಳ ಸರ್ವೆ ನಂಬರಗಳಲ್ಲಿ ನಮೂದಾಗಿದೆ; ( ವಿವರವಾದ ಸರ್ವೆ ನಂಬರ್ ಎಕರೆ ಗ್ರಾಮಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು). | ಪ್ರಸ್ತಾಪಿತ ಜಮೀನಿನ ಹಾಗೂ ಸರ್ವೆ ನಂಬರಿನ ವಿವರ ಈ ಕೆಳಗಿನಂತಿದೆ: (see table below) |
| ಈ) | ಈ ಕಲ್ಲು ಬಂಜರು ಜಮೀನು ಹಣ್ಣಿನ ಗಿಡ ಮತ್ತು ಜೈವಿಕ ಇಂಧನ ಸಸಿಗಳನ್ನು ಬೆಳೆಯಲು ಸೂಕ್ತವಾಗಿದೆಯೇ; (ವಿವರವಾದ ಮಾಹಿತಿ ಕೊಡುವುದು. ). | ತೋಟಗಾರಿಕೆ ಇಲಾಖೆಯಿಂದ ಪಡೆದ ಮಾಹಿತಿಯಂತೆ, ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಸುರುಗೇನಹಳ್ಳಿ ಬೆಟ್ಟದಿಂದ ಮುಂದಕ್ಕೆ ಕೊಡಗೇಹಳ್ಳಿ ಗ್ರಾಮದ ಅಡ್ಡ ರಸ್ತೆಯ ವರೆಗೆ ಇರುವ ಕಲ್ಲು ಬಂಜರು ಜಮೀನಿನಲ್ಲಿ ನೀರಿನ ಅಭಾವ ಇರುವುದರಿಂದ ಗೇರು, ಬೆಟ್ಟದನೆಲ್ಲಿ, ಹುಣಸೆಯಂತಹ ತೋಟಗಾರಿಕೆ ಬೆಳೆ ಬೆಳೆಯಲು ಸೂಕ್ತವಾಗಿದೆ. |

| ಗ್ರಾಮ | ಸ.ನಂ. | ವಿಸ್ತೀರ್ಣ | ಖರಾಬು | ಬಾಕಿ |
|---|---|---|---|---|
| ಸುರಿಗೇನಹಳ್ಳಿ ಕಾವಲ್ | 116 | 77–04 | 15–07 | 61–27 |
| | 124 | 21–11 | 7–18 | 13–33 |
| | ಒಟ್ಟು | 98–12 | 22–25 | 75–20 |

ಸಂಖ್ಯೆ: ಆರ್‌ಡಿ 73 ಎಲ್‌ಜಿಟಿ 2018

( ಆರ್.ವಿ. ದೇಶಪಾಂಡೆ )
ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ,